# ಧಾರಾವಾಹಿ ಲೇಖನ

# ರಾಮಕೃಷ್ಣ ಮಹಾಸಂಘದ ಗುರು ಪರಂಪರೆ

ಮೀನಾ ವಿ.

(ಹಿಂದಿನ ಸಂಚಿಕೆಯಿಂದ)

## ಸ್ವಾಮಿ ರಂಗನಾಥಾನಂದಜಿ ಮಹಾರಾಜ್

ಸ್ವಾಮೀಜಿಯವರು ಕೇರಳದ ಟ್ರಿಕ್ಕೂರು ಎಂಬಲ್ಲಿ ೧೯೦೮, ಡಿಸೆಂಬರ್ ೧೫ ರಂದು ಜನಿಸಿದರು. ಅವರ ಬಾಲ್ಯದ ಹೆಸರು ಶಂಕರನ್. ಬಾಲ್ಯದಲ್ಲಿಯೇ ಇವರದು ಧಾರ್ಮಿಕ ಪ್ರವೃತ್ತಿ. ಚಿಕ್ಕ ವಯಸ್ಸಿನಲ್ಲಿಯೇ ಅವರು ಒಂದು ಸ್ವಪ್ನವನ್ನು ಕಂಡರು. ಅದರ ಪ್ರಕಾರ, ಆ ಊರಿನ ಶಿವನ ದೇವಸ್ಥಾನದ ಲಿಂಗದಿಂದ ಬೆಳಕು ಹೊರಗೆ ಬಂದು ಅವರನ್ನು ಆವರಿಸಿತು. ಅವರು ಕೇರಳದವರಾದರೂ ಇಡೀ ಪ್ರಪಂಚಕ್ಕೆ ಸೇರಿದವರಂತೆ ಭಾವಿಸಿಕೊಂಡಿದ್ದರು. ಅವರು ಮುಂದೆ ಹೇಳುತ್ತಿದ್ದರು, "ನಾನು ಕೇರಳದಲ್ಲಿ ಹುಟ್ಟಿ ಬೆಳೆದಿದ್ದರೂ, ನನ್ನ ಭಾವನೆ ಮತ್ತು ತಾದಾತ್ಮ್ಯತೆ ಆ ರಾಜ್ಯಕ್ಕೆ ಮಾತ್ರ ಅಂಟಿಕೊಂಡಿರಲಿಲ್ಲ. ಅದು ಇಡೀ ದೇಶಕ್ಕೆ, ಅಷ್ಟೇಕೆ ವಿದೇಶಗಳಲ್ಲೂ ಒಂದೇ ಆಗಿತ್ತು. ನಾನು ಯಾವುದೇ ರಾಜ್ಯದಲ್ಲಿ ಭಾಷಣ ಮಾಡಿದರೂ, ಆಗ ಅದೇ ರಾಜ್ಯಕ್ಕೆ ಸೇರಿದವನೆಂಬ ಭಾವನೆ ನನಗೆ ಬರುತ್ತಿತ್ತು."

ಚಿಕ್ಕ ವಯಸ್ಸಿನಲ್ಲಿಯೇ ಬಾಲಕ ಶಂಕರನ್ ಅವರಿಗೆ ಅವರ ತಾಯಿ ಹೇಳಿದರು, "ನೋಡು ಮಗು, ನಾಲಿಗೆ ಸರಸ್ವತಿಯ ಸ್ಥಾನ. ಅದರಿಂದ ಸದಾ ಒಳ್ಳೆಯದೇ ಬರಬೇಕು." ಅದು ಮುಂದೆ ಅಕ್ಷರಶಃ ಸತ್ಯವಾಯಿತು. ಬಾಲಕ ಶಂಕರನ್ ೮ ನೆಯ ತರಗತಿ ಓದುತ್ತಿರುವಾಗಲೇ, 'ಶ್ರೀರಾಮಕೃಷ್ಣ ವಚನ ವೇದ' ವನ್ನು ಓದಿ ಪ್ರಭಾವಿತರಾದರು. ಕೇವಲ ೧೭ ನೆಯ ವಯಸ್ಸಿನಲ್ಲಿಯೇ ಉದಕಮಂಡಲದಲ್ಲಿ ಪೂಜ್ಯ ಸ್ವಾಮಿ ಶಿವಾನಂದಜಿ ಮಹಾರಾಜ್ ಅವರಿಂದ ಮಂತ್ರದೀಕ್ಷೆ ಪಡೆದು, ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿ ಬ್ರಹ್ಮಚಾರಿಯಾಗಿ ಸೇರಿಕೊಂಡರು. ಸುಮಾರು ಆರು ವರ್ಷಗಳ ಕಾಲ ಅಡುಗೆ ಮಾಡುವುದು, ಪಾತ್ರೆ ತೊಳೆಯುವುದು ಮುಂತಾದ ಎಲ್ಲ ಬಗೆಯ ಕೆಲಸಗಳ ಜೊತೆಗೆ, ಶಾಸ್ತ್ರಾಧ್ಯಯನವನ್ನೂ ಮಾಡಿದರು. ಇಷ್ಟೊಂದು ಕೆಲಸಕಾರ್ಯಗಳ ನಡುವೆಯೂ ಆನಂದ ಭರಿತರಾಗಿರುತ್ತಿದ್ದರು.

೧೯೩೩ ರಲ್ಲಿ ಸ್ವಾಮಿ ಶಿವಾನಂದಜಿ ಅವರಿಂದ ಸಂನ್ಯಾಸ ದೀಕ್ಷೆಯನ್ನು ಪಡೆದು, 'ಸ್ವಾಮಿ ರಂಗನಾಥಾನಂದ' ಎಂಬ ಹೆಸರು ಪಡೆದರು. ಅವರ ವಿದ್ವತ್ಪೂರ್ಣವಾದ ಭಾಷಣಗಳನ್ನು ಆಲಿಸಿದ ಸ್ವಾಮಿ ಮಾಧವಾನಂದಜಿ ಅವರು, "ಶ್ರೀರಾಮಕೃಷ್ಣರು ಶಂಕರನನ್ನು ತೊಡೆಯ ಮೇಲೆ ಕೂಡಿಸಿಕೊಂಡು, ಲೀಲೆಯನ್ನು ಮಾಡುತ್ತಿದ್ದಾರೆ" ಎಂದಿದ್ದರು.



ಸ್ವಾಮಿ ರಂಗನಾಥಾನಂದಜಿ ಅವರು ಮೈಸೂರು, ಬೆಂಗಳೂರು, ರಂಗೂನ್, ಕರಾಚಿ, ದೆಹಲಿ, ಕೊಲ್ಕತೆಯ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್, ಹೈದರಾಬಾದ್ ಮುಂತಾದ ಕಡೆಗಳಲ್ಲಿರುವ ರಾಮಕೃಷ್ಣ ಆಶ್ರಮಗಳಲ್ಲಿ ಸೇವೆ ಸಲ್ಲಿಸಿದರು. ತಮ್ಮ ಅಪಾರ ಪಾಂಡಿತ್ಯ ಮತ್ತು ಅತ್ಯುನ್ನತ ಭಾಷಣ ಕಲೆಯ ಮೂಲಕ ಜಗತ್ತಿನ ಹಲವಾರು ದೇಶಗಳಲ್ಲಿ ಸುಪ್ರಸಿದ್ಧರಾಗಿದ್ದರು. ಸುಮಾರು ೧೫ ವರ್ಷಗಳ ಕಾಲ, ಪ್ರತಿ ವರ್ಷವೂ ಹಾಲೆಂಡ್, ಜರ್ಮನಿ, ಅಮೆರಿಕ, ಆಸ್ಟ್ರೇಲಿಯಾ, ಸಿಂಗಾಪೂರ್, ಜಪಾನ್, ರಷ್ಯಾ ಮುಂತಾದ ದೇಶಗಳಿಗೆ ಭಾಷಣ ನೀಡಲು ಹೋಗಿಬರುತ್ತಿದ್ದರು.

ಅವರು ೧೯೯೮ ರಲ್ಲಿ ರಾಮಕೃಷ್ಣ ಮಹಾಸಂಘದ ೧೩ ನೆಯ ಪರಮಾಧ್ಯಕ್ಷರಾದರು. ಮೊದಲಿನಿಂದಲೂ ಅವರ ಕರುಣೆ ಎಲ್ಲರ ಮೇಲೂ ಹರಿದಿತ್ತು. ಎಲ್ಲರಿಗೂ ಸಮಾನವಾದ ಗೌರವ ಕೊಡುತ್ತಿದ್ದರು. ಅತ್ಯಂತ ಶಿಸ್ತುಬದ್ಧ ಜೀವನವನ್ನು ನಡೆಸಿದ ಸ್ವಾಮೀಜಿಯವರು, ಸದಾ ಹಸನ್ಮುಖಿಗಳಾಗಿದ್ದರು. ಅವರು ಏಪ್ರಿಲ್ ೨೫, ೨೦೦೫ ರಂದು ಮಹಾಸಮಾಧಿ ಹೊಂದಿದರು.

## ಸ್ವಾಮಿ ಗಹನಾನಂದಜಿ ಮಹಾರಾಜ್

ಸದಾ ಸ್ಥಿರಚಿತ್ತರೂ, ಶಾಂತಮನಸ್ಕರೂ, ಸಹನಾ ಮೂರ್ತಿಯೂ ಮಂದಹಾಸವದನರೂ ಆಗಿದ್ದ ಸ್ವಾಮಿ ಗಹನಾನಂದಜಿ ಅವರ ಅದ್ಭುತ ಮಾನಸಿಕ ಶಕ್ತಿಯ ಹಿನ್ನೆಲೆ ಏನು? ಎಂದು ಯಾರೋ

ಅವರನ್ನು ಪ್ರಶ್ನಿಸಿದರು. ಅವರು ಸಹಜವಾಗಿ ಹೀಗೆ ಉತ್ತರಿಸಿದರು. "ನೀನು ಭಗವದ್ಗೀತೆಯಲ್ಲಿ ಓದಿಲ್ಲವೇ? ಯಾವ ಆನಂದವನ್ನು ಪಡೆದು ಒಬ್ಬನು ಮತ್ತಾವ ಆನಂದವನ್ನೂ ಬಯಸುವುದಿಲ್ಲವೋ, ಹಾಗೂ ಆ ದಿವ್ಯ ಸ್ಥಿತಿಯಲ್ಲಿ ನೆಲೆನಿಂತು ಎಂತಹ ಕಷ್ಟ ಬಂದರೂ ವಿಚಲಿತನಾಗುವುದಿಲ್ಲವೋ ಅಂತಹ ಸ್ಥಿತಿ ನನ್ನದು."


ಪರಮಪೂಜ್ಯರು ಈಗ ಬಾಂಗ್ಲಾದೇಶದಲ್ಲಿರುವ ಸಿಲ್ಹೆಟ್ ಜಿಲ್ಲೆಯ ಪಹಾರ್‌ಪುರ್ ಎಂಬ ಗ್ರಾಮದಲ್ಲಿ ೧೯೧೬ರಲ್ಲಿ, ಗಂಗಾಪೂಜೆಯ ದಿವಸ ಹುಟ್ಟಿದರು. ಸ್ವಾಮಿಗಳ ಹಿಂದಿನ ಹೆಸರು, ನರೇಶ ರಂಜನ ಚೌಧರಿ ಎಂದು. ಅವರು ಚಿಕ್ಕಂದಿನಿಂದ ಅಂತರ್ಮುಖಿಗಳೂ ಮತ್ತು ಮೌನಿಗಳೂ ಆಗಿದ್ದರು; ನಾಯಕತ್ವದ ಎಲ್ಲ ರೀತಿಯ ಗುಣಗಳನ್ನು ಬೆಳೆಸಿಕೊಂಡಿದ್ದರು. ವಿದ್ಯಾರ್ಥಿಯಾಗಿದ್ದಾಗಲೇ ರಾಮಕೃಷ್ಣ–ವಿವೇಕಾನಂದ ಸಾಹಿತ್ಯದ ಅಧ್ಯಯನ ಮಾಡಿದ್ದ ಸ್ವಾಮಿಗಳು, ಸುಭಾಷ್ ಚಂದ್ರ ಬೋಸ್ ಮತ್ತು ಸ್ವಾಮಿ ಅಭೇದಾನಂದರ ದರ್ಶನವನ್ನು ಪಡೆದಿದ್ದರು.

ಸ್ವಾಮಿಗಳು ರಾಮಕೃಷ್ಣ ಮಹಾಸಂಘವನ್ನು ಭುವನೇಶ್ವರ ಮಠದಲ್ಲಿ ಸೇರಿದರು. ಅಲ್ಲಿನ ಅಧ್ಯಕ್ಷರಾಗಿದ್ದ ಸ್ವಾಮಿ ನಿರ್ವಾಣಾನಂದಜಿ ಅವರ ಮಾರ್ಗದರ್ಶನದಲ್ಲಿ ಆಧ್ಯಾತ್ಮಿಕ ಸಾಧನೆ ಮತ್ತು ಶಾಸ್ತ್ರಾಧ್ಯಯನಗಳಲ್ಲಿ ತಲ್ಲೀನರಾದರು. ಅಲ್ಲಿಯೇ ಸ್ವಾಮಿ ವಿರಜಾನಂದರಿಂದ ಮಂತ್ರದೀಕ್ಷೆಯನ್ನೂ ಪಡೆದರು. ಮುಂದೆ ಅವರು ಬ್ರಹ್ಮಚರ್ಯ ಮತ್ತು ಸಂನ್ಯಾಸ ದೀಕ್ಷೆಗಳನ್ನು ಪಡೆದದ್ದೂ ಅವರಿಂದಲೇ.

**ಸೇವೆ ಮತ್ತು ಸಾಧನೆ** – ಇವೆರಡೂ ಸ್ವಾಮಿಗಳ ಜೀವನದ ಎರಡು ಕಣ್ಣುಗಳಾಗಿದ್ದವು. ಶಿಸ್ತು ಅವರ ಉಸಿರಾಗಿತ್ತು. ದಯೆ ಮತ್ತು ಸಹನೆಗಳು ಅವರಲ್ಲಿ ಮನೆಮಾಡಿತ್ತು. ದೇಹ, ಮನಸ್ಸು, ಆತ್ಮ – ಎಲ್ಲವೂ ಶ್ರೀರಾಮಕೃಷ್ಣರಿಗೆ ಸೇರಿದ್ದು ಎಂಬ ಶರಣಾಗತ ಭಾವ ಅವರದಾಗಿತ್ತು.

ಸ್ವಾಮಿಗಳು ಕೊಲ್ಕತಾದ ಸೇವಾಪ್ರತಿಷ್ಠಾನ ಎಂಬ ಬೃಹತ್ ಆಸ್ಪತ್ರೆಯ ಮೇಲ್ವಿಚಾರಕರಾಗಿ, ಅದರ ಬೆಳವಣಿಗೆಗೆ ಕಾರಣಕರ್ತರಾಗಿದ್ದರು. ಆ ಸಮಯದಲ್ಲಿ ಒಬ್ಬರು, "ಮಹಾರಾಜ್, ಹೇಗಿದ್ದೀರಿ?" ಎಂದು ಕೇಳಿದರು. ಅದಕ್ಕೆ ಅವರು ಕೊಟ್ಟ ಉತ್ತರ ಇದು: "ಚೆನ್ನಾಗಿಲ್ಲ, ಏಕೆಂದರೆ ನಿಮ್ಮ ಮನೆಯಲ್ಲಿ ಯಾರಾದರೂ ಆರೋಗ್ಯವಾಗಿ ಇಲ್ಲದಿದ್ದರೆ, ನೀವು ಚೆನ್ನಾಗಿಲ್ಲ ಎಂದೇ ಹೇಳುತ್ತೀರಿ, ಅಲ್ಲವೇ. ನಾನು ಇರುವುದು ಆಸ್ಪತ್ರೆಯಲ್ಲಿ. ಅಲ್ಲಿರುವವರು ರೋಗಿಗಳೇ. ಆದ್ದರಿಂದ ನಾನು ಚೆನ್ನಾಗಿದ್ದೇನೆ ಎಂದು ಹೇಗೆ ತಾನೇ ಹೇಳಲಿ? "

ರಾಮಕೃಷ್ಣ ಮಹಾಸಂಘದ ಪ್ರಧಾನ ಕಾಯದರ್ಶಿಗಳು ಮತ್ತು ಉಪಾಧ್ಯಕ್ಷರು ಆಗಿ ಸೇವೆ ಸಲ್ಲಿಸಿದ ಪರಮಪೂಜ್ಯರು ೨೦೦೫ ಮೇ ತಿಂಗಳಲ್ಲಿ ಪರಮಾಧ್ಯಕ್ಷರಾಗಿ ಆಯ್ಕೆಯಾದರು.



ತಮಗುಂಟಾಗುತ್ತಿದ್ದ ಶ್ರಮವನ್ನು ಲೆಕ್ಕಿಸದೆ, ದೇಶದ ಮೂಲೆ ಮೂಲೆಗಳಲ್ಲಿ, ಅದರಲ್ಲೂ ವಿಶೇಷವಾಗಿ ಬುಡಕಟ್ಟು ಜನರು ವಾಸಿಸುವ ಪ್ರದೇಶಗಳಿಗೂ ಹೋಗಿ, ಮಂತ್ರದೀಕ್ಷೆಯನ್ನು ಕೊಟ್ಟದ್ದು ಇವರು ಮಾಡಿದ ಮಹಾನ್ ಸೇವೆ.

ತಮ್ಮ ಕಡೆಗಾಲದಲ್ಲಿ 'ಜಯ್ ಗುರು, ಜಯ್ ಗುರು' ಎಂದು ಉಚ್ಚರಿಸುತ್ತ, ದಿವ್ಯತ್ರಯರ ಭಾವಚಿತ್ರಗಳನ್ನು ಎವೆಯಿಕ್ಕದೆ ನೋಡುತ್ತ, ಅತ್ಯಂತ ಸಂತೃಪ್ತಿಯಿಂದ ಭಗವಂತನ ಚರಣಾರವಿಂದಗಳಲ್ಲಿ ಒಂದಾದ ಮಹಾಚೇತನ ಸ್ವಾಮಿ ಗಹನಾನಂದಜಿ ಮಹಾರಾಜ್ ಅವರು.

ಓರ್ವ ಹಿರಿಯ ಸಾಧುಗಳು ಗಹನಾನಂದಜಿ ಅವರನ್ನು ಕುರಿತು ಹೀಗೆ ಹೇಳುತ್ತಿದ್ದರು: "ನಾನು ಅವರಲ್ಲಿ ಮೂರು ದಿವ್ಯಗುಣಗಳನ್ನು ಕಂಡೆ: ೧. ಅವರು ಇಡೀ ಜೀವನದಲ್ಲಿ ಸಂಘದ ಸೇವೆಯನ್ನು ನಗುನಗುತ್ತ ಮಾಡಿದರು. ೨. ಅವರು ತಮ್ಮ ಜೀವನವನ್ನು ಇತರರ ಸೇವೆಗಾಗಿಯೇ ಮುಡಿಪಾಗಿ ಇಟ್ಟಿದ್ದರು. ೩. ಅವರು ಸದಾ ಭಗವಂತನ ದಿವ್ಯನಾಮವನ್ನು ಸ್ಮರಿಸುತ್ತಿದ್ದರು. (ಮುಂದುವರಿಯುವುದು)

## ನವೆಂಬರ್ 2008

### ಆಶ್ರಮದ ಕಾರ್ಯಕ್ರಮಗಳು

| | | |
|---|---|---|
| 9 | ಭಾನುವಾರ | ಏಕಾದಶಿ |
| 10 | ಸೋಮವಾರ | ಸ್ವಾಮಿ ಸುಬೋಧಾನಂದ ಜಯಂತಿ |
| 12 | ಬುಧವಾರ | ಸ್ವಾಮಿ ವಿಜ್ಞಾನಾನಂದ ಜಯಂತಿ |
| 23 | ಭಾನುವಾರ | ಏಕಾದಶಿ |